## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉತ್ತರ ಕನ್ನಡ ಜಿಲ್ಲೆ ಭಟ್ಕಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರಿ ಆದೇಶ ಸಂಖ್ಯೆ.ನಅಇ 311 ಎಂಐಬಿ 2000, ಬೆಂಗಳೂರು ದಿನಾಂಕ:20.9.2000.

2) ಮುಖ್ಯಾಧಿಕಾರಿ ಪುರಸಭೆ ಭಟ್ಕಳ ಹಾಗೂ ನಗರ ಯೋಜನಾ ಪ್ರಾಧಿಕಾರ, ಭಟ್ಕಳ ಇವರ ಪತ್ರ ಸಂಖ್ಯೆ. ಪುಭ.ಸಮಗ್ರಯೋ.ಅಂತಿಮ ಭಟ್ಕಳ 2001-02, 573 ದಿನಾಂಕ:22.9.2001.

3) ನಂಯೋ.ಉನಿಕೇ.ಸಮಗ್ರಅಯೋ. ಅಂತಿಮ.ಭಟ್ಕಳ 2001-02 ದಿನಾಂಕ:4.4.2002.

– – –

<u>ಪ್ರಸ್ತಾವನೆ:</u>

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಭಟ್ಕಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯಾಧಿಕಾರಿಗಳು ನಗರ ಯೋಜನಾ ಪ್ರಾಧಿಕಾರ, ಭಟ್ಕಳ ಇವರು ಭಟ್ಕಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಮಗ್ರಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಭಟ್ಕಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಯನ್ನು 2011ನೇ ಇಸವಿಗೆ ಅಂದಾಜಿಸಲಾಗಿ 1,60,000 ಜನಸಂಖ್ಯೆಗೆ ತಯಾರಿಸಿದ್ದು, ಯೋಜನೆಯ ಅಭಿವೃದ್ಧಿಗಾಗಿ ಒಟ್ಟು 557.71 ಹೆಕ್ಟೇರ್ ಭೂಮಿ ಬೇಕಾಗಬಹುದೆಂದು ಅಂದಾಜು ಮಾಡಿದ್ದು ಈ ಪೈಕಿ 327.38 ಹೆಕ್ಟೇರ್ ಪ್ರದೇಶವನ್ನು ವಸತಿಗಾಗಿ (ಶೇ.58.70), (26.24) ಹೆಕ್ಟೇರ್ ವಾಣಿಜ್ಯಕ್ಕಾಗಿ(ಶೇ.4.71) ಹಾಗೂ (11.44) ಹೆಕ್ಟೇರ್ ಪ್ರದೇಶ ಕೈಗಾರಿಕೆಗಾಗಿ (ಶೇ.2.05) ಕಾಯ್ದಿರಿಸಲಾಗಿದೆ. ಹಾಗೂ ಇನ್ನಿತರೆ ನಾಗರೀಕ ಸೌಲಭ್ಯಗಳಿಗಾಗಿ ಬಯಲು ಜಾಗ : ಉದ್ಯಾನವನಗಳಿಗೆ ಅಗತ್ಯ ಪ್ರದೇಶಗಳನ್ನು ನಿಗದಿಗೊಳಿಸಲಾಗಿದೆ ಎಂತಲೂ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ ಎಂತಲೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ಯೋಜನೆ ತಯಾರಿಸಿದ್ದು ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 13(13) ರನ್ವಯ ಭಟ್ಕಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ಕೋರಿ ನಗರ ಯೋಜನಾ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ.ನಅಇ 79 ಬೆಮುಪ್ರಾ 2001, ಬೆಂಗಳೂರು ದಿನಾಂಕ: 2.9.2002.</u>

ಭಟ್ಕಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 13(3) ರನ್ವಯ ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ಅಂತಿಮ ಅನುಮೋದನೆ ನೀಡಿದೆ.

1) ಭಟ್ಕಳ ಪಟ್ಟಣಕ್ಕೆ ಕೋಸ್ಟಲ್ ಜೋಡಿಂಗ ರೆಗ್ಯುಲೇಷನ್ಸ್ (ಸಿಜೆಡಿಆರ್)ನ ಪ ಪ್ರಸ್ತಾವನೆಯನ್ನು ಸಮಗ್ರಾಭಿವೃದ್ಧಿ ಯೋಜನೆಯ ವರದಿ ಹಾಗೂ

ನಕ್ಷೆಗಳಲ್ಲಿ ಸ್ಪಷ್ಟವಾಗಿ ಅಳವಡಿಸಿಕೊಳ್ಳಬೇಕಿದ್ದು ಸದರಿ ಪ್ರಸ್ತಾವನೆಗಳ ವಿವರಗಳನ್ನು ಸಕ್ಷಮ ಪ್ರಾಧಿಕಾರವು (ಪರಿಸರ ಇಲಾಖೆ) ಅಂತಿಮಗೊಳಿಸಿಲ್ಲದ ಕಾರಣ ಸಿ.ಆರ್.ಜಡ್. ನಿಯಮಾವಳಿಗಳನ್ನು ನಂತರ ಸ್ಪಷ್ಟವಾಗಿ ಅಳವಡಿಸಿಕೊಳ್ಳುವುದು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಾಗ ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

2) ಸಮಗ್ರಾಭಿವೃದ್ಧಿ ಯೋಜನೆಯ ಪ್ರಸ್ತಾಪಿತ ಭೂ ಉಪಯೋಗ ನಕ್ಷೆಯಲ್ಲಿ ರಾಷ್ಟ್ರೀಯ ಹೆದ್ದಾರಿ ನಂ.17ಕ್ಕೆ ಹೊಂದಿಕೊಂಡಂತೆ ಕೈಗಾರಿಕೆ ಉಪಯೋಗಕ್ಕೆ ಪ್ರಸ್ತಾಪಿಸಿರುವ (ಎ–ಎ, ಬಿ–ಬಿ, ಬಿ–ಬಿ ಎಂದು ನಮೂದಿಸಿರುವ) ಪ್ರದೇಶಗಳಲ್ಲಿ ಸುತ್ತಲೂ ವಸತಿ ವಲಯವು ಇರುವುದರಿಂದ ಕೇವಲ ಸೇವಾ ಕೈಗಾರಿಕೆಗಳಿಗೆ ಮಾತ್ರ (ಸರ್ವಿಸ್ ಇಂಡಸ್ಟ್ರೀಸ್) ಅಭಿವೃದ್ಧಿಗೆ ಅನುಮೋದಿಸ ತಕ್ಕದ್ದು. ಮತ್ತು ನಕ್ಷೆಯಲ್ಲಿ ಗುರುತಿಸಿದಂತೆ ಗ್ರೀನ್ ಸ್ಟ್ರಿಪ್:ಬಫರ್ ಅಳವಡಿಸಿಕೊಳ್ಳತಕ್ಕದ್ದು. ಜೊತೆಗೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.17 ರ ತಿರುವಿನಲ್ಲಿ (ತಹಸೀಲ್ದಾರ್ ಕಛೇರಿ ಹತ್ತಿರ) ಕೈಗಾರಿಕೆಗೆ ಉದ್ದೇಶಿಸಿರುವ ಜಾಗೆಯು ಹೆದ್ದಾರಿಗೆ ಲಗತ್ತಾಗಿದ್ದು ಈ ಪ್ರದೇಶವು ಕಟ್ಟಡ ರೇಖೆಯ ವ್ಯಾಪ್ತಿಯೊಳಗೇ ಬರುವ ಕಾರಣ ಸದರಿ ಪ್ರದೇಶವನ್ನು ಹಸಿರು ಪಟ್ಟಿ (ಗ್ರೀನ್ ಬಫರ್) ಎಂದು ಪರಿಗಣಿಸತಕ್ಕದ್ದು.

3) ಸಮಗ್ರಾಭಿವೃದ್ಧಿ ಯೋಜನೆಯ ವರದಿಯ ಕೊನೆಯ ಪುಟದಲ್ಲಿ ಉಪ ವಿಭಾಗ ನಿಯಮಾವಳಿಗಳಿಗೆ ಪ್ರತ್ಯೇಕವಾಗಿ ತಯಾರಿಸಲಾದ ವಲಯ ನಿಯಮಾವಳಿಗಳನ್ನು ಲಗತ್ತಿಸಲಾಗಿದ್ದು, ಈ ಉಪ ವಿಭಾಗ ನಿಯಮಾವಳಿಗಳನ್ನು ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರುವಾಗ ಪಾಲಿಸತಕ್ಕದ್ದು.

ಸಮಗ್ರಾಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಶ್ರೀಧರಮೂರ್ತಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

1) ನಗರ ಯೋಜನಾ ನಿರ್ದೇಶಕರು, ಬೆಂಗಳೂರು (ಸಮಗ್ರಾಭಿವೃದ್ಧಿ ಯೋಜನೆಯ ನಕ್ಷೆ ಹಾಗೂ ವರದಿಯೊಂದಿಗೆ).
2) [illegible]ಧಿಕಾರಿಕಾರಿಗಳು ಪುರಸಭೆ ನಗರ ಯೋಜನಾ ಪ್ರಾಧಿಕಾರ, ಭಟ್ಕಳ (ಸಮಗ್ರಾಭಿವೃದ್ಧಿ ಯೋಜನೆಯ ನಕ್ಷೆ ಹಾಗೂ ವರದಿಯೊಂದಿಗೆ)
3) ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ ಬೆಂಗಳೂರು.
4. ವಾರದ ಗೆಜೆಟ್ :ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.